**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**ಸಿ.ಸಿ.ನಂ. 453/2024**

| | | |
|---|---|---|
| ಸಾಕ್ಷಿದಾರರ ಹೆಸರು | : | ಭರತ್ ಕುಮಾರ್ ಎನ್.ಜೆ. |
| ತಂದೆಯ ಹೆಸರು | : | ಜಗದೀಶ್ |
| ವಯಸ್ಸು | : | 33 ವರ್ಷ |
| ಉದ್ಯೋಗ | : | ಅಬಕಾರಿ ಪೇದೆ |
| ವಾಸಸ್ಥಳ | : | ಹೆಚ್.ಡಿ. ಕೋಟೆ ಟೌನ್. |

**ಸಾಕ್ಷಿಯನ್ನು ದಿನಾಂಕಃ 12.01.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸ. ಸ. ಅ. ರವರಿಂದಃ**

ನಾನು ನವೆಂಬರ್ 2019 ರಿಂದ ಇಲ್ಲಿಯವರೆಗೆ ಹೆಚ್.ಡಿ. ಕೋಟೆಯ ಅಬಕಾರಿ ನಿರೀಕ್ಷಕರ ಕಛೇರಿಯಲ್ಲಿ ಅಬಕಾರಿ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 08.04.2023 ರಂದು ಕರ್ನಾಟಕ ರಾಜ್ಯ ವಿಧಾನಸಭಾ ಚುನಾವಣೆ 2023 ರ ನೀತಿ ಸಂಹಿತೆಯ ಹಿನ್ನೆಲೆಯಲ್ಲಿ ನಾನು ಹಾಗು ಚಾಸಾ-3 ರಿಂದ ಚಾಸಾ-5 ರವರು ಚಾಸಾ-6 ರವರ ಜೊತೆ ಸರಗೂರು ನಗರದಲ್ಲಿ ಗಸ್ತು ಕರ್ತವ್ಯದಲ್ಲಿದ್ದಾಗ ಸಂಜೆ ಸುಮಾರು 07.40 ಗಂಟೆ ಸಮಯದಲ್ಲಿ ಚಾಸಾ-6 ರವರಿಗೆ ಸರಗೂರು ತಾಲ್ಲೋಕಿನ ಕೊತ್ತೇಗಾಲ ಗ್ರಾಮದ ನಾಗೇಶ @ ಗುಂಡ ಎನ್ನುವವನು ಕೊತ್ತೇಗಾಲ ಗ್ರಾಮದ ಕಾಲುವೆಯ ಬಲಭಾಗದಲ್ಲಿರುವ ಕುಲುಮೆಯ ಬಳಿಯಲ್ಲಿ ಅಕ್ರಮವಾಗಿ ಮದ್ಯ

ಮಾರಾಟ ಮಾಡುತ್ತಿದ್ದಾನೆಂದು ಮಾಹಿತಿ ಬಂದಿದ್ದು ಸದರಿ ಮಾಹಿತಿಯ ವಿಚಾರವನ್ನು ನನಗೆ ಹಾಗು ಚಾಸಾ-3 ರಿಂದ ಚಾಸಾ-5 ರವರಿಗೆ ತಿಳಿಸಿ, ಚಾಸಾ-6 ರವರು ನಮ್ಮನ್ನು ಇಲಾಖಾ ಜೀಫ್ ನಲ್ಲಿ ಕರೆದುಕೊಂಡು ಸರಗೂರು ತಾಲ್ಲೋಕಿನ ಕೊತ್ತೇಗಾಲ ಗ್ರಾಮದ ಬಸ್ ನಿಲ್ದಾಣದ ಬಳಿ ಹೋಗಿದ್ದು ಅಲ್ಲಿ ಚಾಸಾ-1 ರವರು ಇದ್ದು, ಅವರ ಬಳಿ ಚಾಸಾ-6 ರವರು ಮಾಹಿತಿಯ ವಿಚಾರವನ್ನು ತಿಳಿಸಿ ದಾಳಿಯ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ಕೇಳಿಕೊಂಡಿದ್ದು ಅದಕ್ಕೆ ಆತ ಒಪ್ಪಿಕೊಂಡಿರುತ್ತಾನೆ. ನಂತರ ಚಾಸಾ-6 ರವರು ನಮ್ಮನ್ನು ಹಾಗು ಚಾಸಾ-1 ರವರನ್ನು ಕರೆದುಕೊಂಡು ಸದರಿ ಮಾಹಿತಿದಾರರು ತಿಳಿಸಿದ ಕೋತ್ತೇಗಾಲ ಕೊತ್ತೇಗಾಲ ಗ್ರಾಮದ ಕಾಲುವೆಯ ಬಲಭಾಗದಲ್ಲಿರುವ ಕುಲುಮೆಯ ಬಳಿ ತೆರಳಿದಾಗ ಅಲ್ಲಿ ಆರೋಪಿಯು ನಮ್ಮ ಇಲಾಖಾ ವಾಹನ ಹಾಗು ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಓಡಿ ಹೋಗಿರುತ್ತಾನೆ. ನಂತರ ಚಾಸಾ-6 ರವರು ನಮ್ಮ ಹಾಗು ಪಂಚರಾದ ಚಾಸಾ-1 ರವರ ಜೊತೆ ಆರೋಪಿಯ ವಾಹನದ ಬಳಿ ಬಂದು ಅದನ್ನು ಶೋಧಿಸುವ ಸಲುವಾಗಿ ಸ್ಥಳದಲ್ಲಿಯೇ ಶೋಧನಾ ಸಮುಚಿತ ಆಧಾರವನ್ನು ತಯಾರಿಸಿಕೊಂಡು ನಮ್ಮ ಹಾಗು ಪಂಚರಾದ ಚಾಸಾ-1 ರವರ ಸಮಕ್ಷಮ ಸದರಿ ಆರೋಪಿಯ ಬೈಕ್ ಅನ್ನು ಪರಿಶೀಲಿಸಲಾಗಿ ಅದು ಕಪ್ಪು ಬಣ್ಣದ ಹೀರೋ ಸ್ಪ್ಲೆಂಡರ್ ಪ್ಲಸ್ ದ್ವಿ-ಚಕ್ರ ವಾಹನವಾಗಿದ್ದು ಅದಕ್ಕೆ ಯಾವುದೇ ನೋಂದಣಿ ಸಂಖ್ಯೆಯ ಬೋರ್ಡ್ ಇದ್ದಿರುವುದಿಲ್ಲ. ಅದರ chasis ಸಂಖ್ಯೆ MBLH AW 123M 5G 27255 ಆಗಿರುತ್ತದೆ. ಸದರಿ ದ್ವಿ-ಚಕ್ರ ವಾಹನವನ್ನು ಪರಿಶೀಲಿಸಲಾಗಿ ಸದರಿ ದ್ವಿ-ಚಕ್ರ ವಾಹನದ ಪೆಟ್ರೋಲ್ ಟ್ಯಾಂಕ್ ನ ಬಳಿ 01 ಬಿಳಿ ಬಣ್ಣದ ಪ್ಲಾಸ್ಟಿಕ್ ಬ್ಯಾಗ್ ಇದ್ದು ಅದನ್ನು

ಪರಿಶೀಲಿಸಲಾಗಿ ಅದರಲ್ಲಿ 90 ಎಂ.ಎಲ್. ನ ಓರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ 92 ಮಧ್ಯದ ಟೆಟ್ರಾ ಪ್ಯಾಕೆಟ್ ಗಳು ಇದ್ದಿರುವುದು ಕಂಡು ಬಂದಿರುತ್ತದೆಂದರೆ. ನಂತರ ಚಾಸಾ-6 ರವರು ನಮ್ಮ ಹಾಗು ಚಾಸಾ-1 ರವರ ಸಮಕ್ಷಮ ರಂತೆ ಮಹಜರ್ ಕ್ರಮ ಜರುಗಿಸಿ ಸದರಿ 92 ಮಧ್ಯದ ಟೆಟ್ರಾ ಪ್ಯಾಕೆಟ್ ಗಳ ಪೈಕಿ ರಾಸಾಯನಿಕ ಪರೀಕ್ಷೆಯ ಸಲುವಾಗಿ 35 ಮಧ್ಯದ ಟೆಟ್ರಾ ಪ್ಯಾಕೆಟ್ ಗಳನ್ನು ಪ್ರತ್ಯೇಕವಾಗಿ ಬಿಳಿಯ ಬಟ್ಟೆಯ ಚೀಲದಲ್ಲಿ ಹಾಕಿ ಬಾಯಿ ಹೊಲಿದು ಸೀಲು ಮಾಡಿ, ಸಹಿ ಇರುವ ಚೀಟಿಯನ್ನು ಅಂಟಿಸಿ ಸದರಿ ರಾಸಾಯನಿಕ ಪರೀಕ್ಷೆಗೆ ತೆಗೆದ 35 ಮಧ್ಯದ ಟೆಟ್ರಾ ಪ್ಯಾಕೆಟ್ ಗಳು ಹಾಗು ಉಳಿದ ಮಧ್ಯದ ಟೆಟ್ರಾ ಪ್ಯಾಕೆಟ್ ಗಳು ಹಾಗು ಆರೋಪಿ ಕೃತ್ಯಕ್ಕೆ ಬಳಸಿದ ಬೈಕ್ ಅನ್ನು ಅಮಾನತ್ತುಪಡಿಸಿಕೊಂಡಿರುತ್ತೇವೆ. ಸದರಿ ಮಹಜರ್ ಗೆ ನಾನು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ. ಸದರಿ ಮಹಜರ್ ಅನ್ನು ರಾತ್ರಿ 08.00-09.00 ಗಂಟೆಯವರಗೆ ಜರುಗಿಸಿರುತ್ತೇವೆ. ನಂತರ ಅಮಾನತ್ತುಪಡಿಸಿಕೊಂಡ ಸ್ವತ್ತುಗಳೊಂದಿಗೆ ಕಛೇರಿಗೆ ಹಿಂದಿರುಗಿದ್ದು, ನಂತರ ಚಾಸಾ-6 ರವರು ಸ್ವ-ವರದಿಯನ್ನು ತಯಾರಿಸಿ ಪ್ರಕರಣ ದಾಖಲಿಸಿರುತ್ತಾರೆ. ನಂತರ ನಾನು ಅದೇ ದಿನ ಅಂದರೆ ದಿನಾಂಕಃ 08.04.2023 ರಂದು ಚಾಸಾ-6 ರವರ ಸಮಕ್ಷಮ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಗೆ ನಿ.ಪಿ.-1 ನ್ನು ತೋರಿಸಲಾಗಿ ಸಾಕ್ಷಿಯು ಅದು ಮೇಲೆ ಹೇಳಿದಂತೆ ಚಾಸಾ-6 ರವರು ಜರುಗಿಸಿದ ಮಹಜರ್ ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯು ಗುರುತಿಸಿದ ಮೇರೆಗೆ ನಿ.ಪಿ.-1 ರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.-1(ಬಿ)** ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ

ಮುಂದಿರುವ 35 ಮಧ್ಯದ ಟೆಟ್ರಾ ಪ್ಯಾಕೆಟ ಗಳನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಅವುಗಳನ್ನು ಮುದ್ದೆಮಾಲು-1 ರಿಂದ ಮುದ್ದೆಮಾಲು-35 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**ನ್ಯಾಯಾಲಯದ ಅವಧಿ ಮುಗಿದಿದ್ದರಿಂದ ಪಾಟೀ ಸವಾಲಿಗೆ ಸಮಯಾವಕಾಶ ನೀಡಿ ಮುಂದೂಡಲಾಯಿತು.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**